## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 88 (36) |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಗಡಿ ಭಾಗದಲ್ಲಿರುವ ಕನ್ನಡ ಶಾಲೆಗಳನ್ನು ಉಳಿಸಲು ಹಾಗೂ ಈ ಶಾಲೆಗಳಿಗೆ ಉತ್ತೇಜನ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು). | 1. ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕ ಯೋಜನೆಗಳಾದ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ವರ್ಕ್ ಬುಕ್ ಮಧ್ಯಾಹ್ನದ ಉಪಹಾರ ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.<br>2. ಗಡಿ ಭಾಗದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಲು ಹಾಗೂ ಭಾಷಾ ಸಮಸ್ಯೆಯನ್ನು ನಿವಾರಿಸಲು ಮಕ್ಕಳ ಶೈಕ್ಷಣಿಕ ಹಿತ-ದೃಷ್ಟಿಯಿಂದ ಕನ್ನಡ ಶಿಕ್ಷಕರನ್ನು ನೇಮಕಾತಿ ಮಾಡಲು ಕ್ರಮವಹಿಸಲಾಗುತ್ತಿದೆ.<br>3. ಗುಣಾತ್ಮಕ ಶಿಕ್ಷಣಕ್ಕಾಗಿ ನಿಯಮಿತವಾಗಿ ಶಿಕ್ಷಕರಿಗೆ ತರಬೇತಿ ಆಯೋಜಿಸಲಾಗುತ್ತಿದೆ.<br>4. 6 ರಿಂದ 8ನೇ ತರಗತಿಯವರೆಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಎನ್.ಸಿ.ಇ.ಆರ್.ಟಿ ಪಠ್ಯವಸ್ತುವಿನ ಪಠ್ಯಪುಸ್ತಕಗಳನ್ನು ಜಾರಿಗೊಳಿಸಲಾಗಿದೆ.<br>5. ಸರ್ಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.<br>6. 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳು(ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ.<br>7. ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಮತ್ತು ನ್ಯೂನ್ಯತೆಗನುಗುಣವಾಗಿ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.<br>8. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ ಯೋಗ, ಕರಾಟೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>9. ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಸಂಬಂಧಿಸಿದ ಪೋಷಕರು ಮತ್ತು ವಿದ್ಯಾರ್ಥಿಗಳನ್ನು ಮನವೊಲಿಸಿ, ಪುನ: ಶಾಲೆಗೆ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್‌ಡಿಎಮ್‌ಸಿ, ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.<br>10. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡುಹಿಡಿಯಲಾಗುತ್ತಿದೆ.<br>11. ಶಾಲಾ ದತ್ತು ಯೋಜನೆ (ಸಿ.ಎಸ್.ಆರ್) ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸಲಾಗುತ್ತಿದೆ.<br>12. 6 ಮತ್ತು 8ನೇ ತರಗತಿಗೆ 1500 ಜಿ.ಪಿ.ಟಿ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ<br>13. 2021-22 & 2022-23 ರಲ್ಲಿ ಕಲಿಕಾಚೇತರಿಕೆ ಕಾರ್ಯಕ್ರಮವನ್ನು ಅನಷ್ಠಾನಗೊಳಿಸಿ ಶಿಕ್ಷಕರಿಗೆ ಕೋವಿಡ್ ಸಮಯದಲ್ಲಿ ತರಬೇತಿ ನೀಡಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಒತ್ತು ನೀಡಲಾಗಿದೆ.<br>14. ರಾಜ್ಯದ ಸರ್ಕಾರಿ & ಅನುದಾನಿತ ಶಾಲೆಗಳಿಂದ ಸಾಧನೆ ಮಾಡಿದ ಶಿಕ್ಷಕರುಗಳಿಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಗುತ್ತಿದೆ. ಇದರಿಂದಾಗಿ ಶಿಕ್ಷಕರು ತಮ್ಮ ಬೋಧನಾ |

ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪರಿಣಾಮಕಾರಿ ಪಾಠ ಬೋಧನೆಗೆ ಶ್ರಮಿಸುವರು.

15. ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ಗುರ್ತಿಸಿ ಶಾಲಾ ನವೀಕರಣಕ್ಕಾಗಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ
16. ಪ್ರತಿ ವರ್ಷ ರಾಜ್ಯದಲ್ಲಿ 8 ಉತ್ತಮ ಶಾಲೆಯನ್ನು ಗುರ್ತಿಸಿ ಸ್ವಾಭಿಮಾನಿ ಶಾಲೆಗಳಾಗಿ ಆಯ್ಕೆ ಮಾಡಿ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.
17. ರಾಜ್ಯದ ಎಲ್ಲಾ ಶಾಲೆಗಳಿಗೆ ಸಿ.ಆರ್.ಪಿ ಬಿ.ಆರ್.ಪಿ. ಬಿ.ಆರ್.ಸಿ ಡಯಟ್ ಉಪನ್ಯಾಸಕರು ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಗಳು ಪ್ರತಿ ಮಾಹೆ ಸದರಿ ಶಾಲೆಗಳ ಭೇಟಿ ನೀಡುವುದರೊಂದಿಗೆ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಅನುಪಾಲನೆ ಮಾಡಲು ಸೂಚಿಸಲಾಗಿರುತ್ತದೆ.
18. ಪಿ.ಆರ್.ಡಿ.ಎಫ್ ಯೋಜನೆಯಡಿ ಗ್ರಾಮಸಭೆ ನಡೆಸುವ ಮೂಲಕ ಮಕ್ಕಳ ದಾಖಲಾತಿ ಆಂದೋಲನವನ್ನು ಹಮ್ಮಿಕೊಂಡು ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮವಹಿಸುವುದು.
19. ಎನ್.ಟಿ.ಎಸ್.ಇ /ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ & ಎಂ.ಹೆಚ್. ಆರ್.ಡಿ ಮೂಲಕ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
20. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಪ್ರತಿ ಬ್ಲಾಕ್‌ನಲ್ಲಿ ನೋಡಲ್ ಅಧಿಕಾರಿಗಳ ನೇಮಿಸಿ ಪೋಷಕರ & ಮಕ್ಕಳ ಮನವೊಲಿಸಿ ಶಾಲೆಗೆ ಕರೆತರಲು ಕ್ರಮವಹಿಸಲಾಗುತ್ತಿದೆ.
21. ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.

ಆ. ರಾಜ್ಯದ ಗಡಿ ಭಾಗದ ಕನ್ನಡ ಶಾಲೆಗಳಲ್ಲಿನ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳ ಸಂಖ್ಯೆ: ಗಣನೀಯವಾಗಿ ಕಡಿಮೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು).

ಹೌದು

ರಾಜ್ಯದ ಗಡಿಭಾಗದಲ್ಲಿರುವ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಈ ಕೆಳಕಂಡಂತೆ ಮೂಲಭೂತ ಸೌಲಭ್ಯ ಒದಗಿಸಲಾಗಿದೆ.

| ವರ್ಷ | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 2019-20 | 336 | 472 | 5231.48 |
| 2020-21 | 568 | 830 | 10187.60 |
| ಒಟ್ಟು | 904 | 1302 | 15419.08 |

ರಾಜ್ಯದ ಗಡಿ ಭಾಗದಲ್ಲಿರುವ ಸರ್ಕಾರಿ ಪ್ರಾಥಮಿಕ & ಪ್ರೌಢಶಾಲೆಗಳ ದುರಸ್ತಿ ಕಾಮಗಾರಿಗೆ:

| ವರ್ಷ | ಶಾಲೆಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 2019-20 | 674 | 1762.01 |
| 2020-21 | 52 | 163.11 |
| 2021-22 | 242 | 921.00 |
| 2022-23 | 1049 | 2760.00 |
| ಒಟ್ಟು | **2017** | **5606.12** |

- 2020-21ನೇ ಸಾಲಿಗೆ ಅಮೃತ ಶಾಲಾ ಸೌಲಭ್ಯ ಯೋಜನೆಯಡಿ ಗಡಿ ಭಾಗದ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯ ವಲಯ ಒಟ್ಟು

750 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೂಲಭೂತ ಸೌಲಭ್ಯಗಳಿಗೆ ತಲಾ ರೂ.10.00 ಲಕ್ಷಗಳಂತೆ ಒಟ್ಟು ರೂ.7500.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

- 2022-23ನೇ ಸಾಲಿಗೆ ರಾಜ್ಯವಲಯದಡಿ 6601 ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಯು ಮಂಜೂರಾಗಿದ್ದು, 6558 ಕೊಠಡಿಗಳು ಈಗಾಗಲೇ ಹಂಚಿಕೆಯಾಗಿದ್ದು, ಉಳಿದ 43 ಕೊಠಡಿಗಳ ಹಂಚಿಕೆಯು ಪ್ರಗತಿಯಲ್ಲಿದೆ.
- 2020-21 ರಿಂದ 2022-23ನೇ ಸಾಲಿನ ನರೇಗಾ ಒಗ್ಗೂಡಿಸುವಿಕೆಯ ಮೂಲಕ ಗಡಿಭಾಗದ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯ ವಲಯ ಸರ್ಕಾರಿ ಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

| ಕ್ರಸ | ವರ್ಷ | ಬಿಡುಗಡೆಯಾದ ಅನುದಾನ |
|---|---|---|
| 01 | 2020-21 | 2920.00 |
| 02 | 2021-22 | 3500.00 |
| 03 | 2022-23 | 23450.00 |
| | **ಒಟ್ಟು** | **29870.99** |

2022-23ನೇ ಸಾಲಿಗೆ ಸರ್ಕಾರಿ ಶಾಲೆಗಳ ದುರಸ್ಥಿ ಕಾಮಗಾರಿಗೆ ರೂ.100.00 ಕೋಟಿಗಳ ಅನುದಾನ ನಿಗದಿಯಾಗಿರುತ್ತದೆ.ಅನುದಾನದ ಲಭ್ಯತೆಯನ್ನು ಆದರಿಸಿ ಹಂತ ಹಂತವಾಗಿ ಕ್ರಮವಹಿಸಲಾಗಿದೆ.

ಇ. ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿರುವ ರಾಜ್ಯದ ಗಡಿ ಪ್ರದೇಶದಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಿಂದ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು).

ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿರುವ ಗಡಿ ಪ್ರದೇಶದಲ್ಲಿರುವ ಕನ್ನಡ ಮಾಧ್ಯಮ ವಿಭಾಗದ ಶಾಲೆಗಳ ಸಂಖ್ಯೆ 62
ಕಳೆದ ಮೂರು ವರ್ಷಗಳಲ್ಲಿನ ಮಕ್ಕಳ ಸಂಖ್ಯೆ ಈ ಕೆಳಗಿನಂತಿದೆ.

| 2020-21 | 2021-22 | 2022-23 | ಒಟ್ಟು |
|---|---|---|---|
| 12804 | 12806 | 14240 | 39850 |

ಈ. ಈ ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಕಲಿತಿರುವ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿ ಯಾವುದಾದರೂ ಮೀಸಲಾತಿ, ಗಡಿನಾಡು ಕನ್ನಡಿಗರೆಂದು ಪ್ರಮಾಣ ಪತ್ರ ಅಥವಾ ಹೆಚ್ಚಿನ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ: ನೀಡಿದ್ದಲ್ಲಿ ಮಾಹಿತಿ ನೀಡುವುದು: ಇಲ್ಲವಾದಲ್ಲಿ ಈ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ನೀಡಲು ಸರ್ಕಾರ ಕೈಗೊಂಡ ತೀರ್ಮಾನಗಳೇನು; (ವಿವರ ನೀಡುವುದು).

ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಕಲಿತಿರುವ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಮೀಸಲಾತಿ ಸೌಲಭ್ಯ ಇರುವುದಿಲ್ಲ ಹಾಗೂ

ಗಡಿನಾಡು ಕನ್ನಡಿಗರೆಂದು ಪ್ರಮಾಣ ಪತ್ರ ವಿತರಿಸುವ ಪ್ರಸ್ತಾಪವು ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ: ಇಪಿ 01 ಪಿಎಂಎ 2023**

(ಬಿ.ಸಿ. ನಾಗೇಶ್)
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು**